**<u>ಸಾಕ್ಷಿಯನ್ನು ದಿಃ 09.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್.ಎಸ್ ವಕೀಲರಿಂದಃ-</u>**

ನಾನು ವ್ಯವಸಾಯದ ಕೆಲಸದೊಂದಿಗೆ ಸಮಾಜ ಸೇವಕನಾಗಿ ಕೆಲಸ ಮಾಡುತ್ತೇನೆ. ಜ್ಞಾನದೇವ ರವರು ನನಗೆ ಗೊತ್ತು. ಅವರು ತೀರಿಕೊಂಡು 4-5 ವರ್ಷಗಳು ಆಗಿರುತ್ತದೆ. ಅವರು ಹೆಂಡತಿ ಜಮುನಾ ಗೊತ್ತು. ಅವರು ತೀರಿಕೊಂಡು 5-6 ವರ್ಷಗಳು ಆಗಿರುತ್ತವೆ. ಜ್ಞಾನ ದೇವ ಮತ್ತು ಜಮುನಾ ರವರಿಗೆ ಒಟ್ಟು 5 ಜನ ಮಕ್ಕಳು. ಒಬ್ಬ ಗಂಡು ಮಗ 4 ಜನ ಹೆಣ್ಣು ಮಕ್ಕಳು. ಅವರ ಹೆಸರುಗಳು ನನಗೆ ಗೊತ್ತಿಲ್ಲ. ನಾನು ರಾಜಕೀಯದಲ್ಲಿ ಇದ್ದೇನೆ, ನಾನು 1990 ರಿಂದ 1996 ರ ವರೆಗೆ ಪುರಸಭಾ ಸದಸ್ಯನಾಗಿದ್ದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ.

20 ವರ್ಷಗಳ ಹಿಂದೆಯೆ ಜ್ಞಾನದೇವ ರವರಿಗೆ ಪಾರ್ಶ್ವವಾಯು ಆಗಿತ್ತು. ಜ್ಞಾನ ದೇವ್ ರವರು ರಾಘವೇಂದ್ರ ಸಾ-ಮಿಲ್ ಅನ್ನು 40 ವರ್ಷಗಳಿಂದಲೂ ಇಟ್ಟುಕೊಂಡಿದ್ದರು. ಯಾವ ಜಾಗಕ್ಕೆ ಲೈಸನ್ಸ್ ಪಡೆದಿದ್ದರು ಎಂದು ನನಗೆ ಗೊತ್ತು. ಸದರಿ ಜಾಗದ ಪೂರ್ವಕ್ಕೆ ಯಾರದೊ ಒಬ್ಬರ ಸೈಟ್ ಇದೆ, ಅದು ಯಾರದ್ದು ಎಂದು ಗೊತ್ತಿಲ್ಲ. ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಪಕ್ಷಿರಾಜಪುರದವರ ಮನೆ ಇದೆ, ಆದರೆ ಅವರ ಹೆಸರು ಗೊತ್ತಿಲ್ಲ. ದಕ್ಷಿಣಕ್ಕೆ ರಸ್ತೆ ಇದೆ. ಪೂರ್ವಕ್ಕೆ ಯಾರದೊ ಒಬ್ಬರ ಸೈಟ್ ಇದೆ ಎಂದು ಹೇಳಿದ್ದು, ಅದರ ಚಕ್ಕುಬಂದಿ ಹೇಳಲು ಬರುವುದಿಲ್ಲ. ಉತ್ತರಕ್ಕೆ ಪಕ್ಷಿರಾಜಪುರದವರ ಮನೆ ಇದೆ ಎಂದು ಹೇಳಿದ್ದು, ಅದರ ಚಕ್ಕುಬಂದಿ ಎಂದರೆ ಪೂರ್ವಕ್ಕೆ ಯಾರದ್ದೊ ಸೈಟ್ ಇದೆ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ರಸ್ತೆ ಇದೆ, ದಕ್ಷಿಣಕ್ಕೆ ಜ್ಞಾನದೇವ್ ರವರ ಮನೆ ಇದೆ.

ನಾನು 50 ವರ್ಷಗಳಿಂದಲೂ ರಾಜಕೀಯದಲ್ಲಿ ಇದ್ದೇನೆ. 1990 ನೇ ಸಾಲಿನಲ್ಲಿ ಮುನ್ಸಿಪಾರ್ಟಿ ಸಭೆಯವರು ಸೈಟ್ ಗಳನ್ನು ಹಂಚಿದ್ದು ನನಗೆ ಗೊತ್ತಿದೆ. 11, 12,13, ಮತ್ತು 15 ರ ಸೈಟ್ ಗಳನ್ನು ಮುನ್ಸಿಪಾರ್ಟಿ ರವರು ಯಾರಿಗೆ ಕೊಟ್ಟಿದ್ದರು ಎಂದು ನನಗೆ ಗೊತ್ತಿದೆ. ಸದರಿ ಸೈಟ್ ಗಳನ್ನು ಜ್ಞಾನದೇವ್ ರವರಿಗೂ ಕೊಟ್ಟಿದ್ದರು ಮತ್ತು ಮುಸ್ಲಿಂ ರೊಬ್ಬರಿಗೆ ಕೊಟ್ಟಿದ್ದರು. ಸದರಿ ಮುಸ್ಲಿಂರೊಬ್ಬರ ಹೆಸರು ಏನೆಂದರೆ ಈಗ ನೆನಪಿಗೆ ಬರುತ್ತಿಲ್ಲ. ಸದರಿ ಮುಸ್ಲಿಂ ರೊಬ್ಬರಿಗೆ ಮುನ್ಸಿಪಾರ್ಟಿ ರವರು ಹರಾಜಿನಲ್ಲಿ ಸೈಟ್ ಕೊಟ್ಟಿದ್ದರು. ಸಾರ್ವಜನಿಕ ಹರಾಜಿನಲ್ಲಿ ತಲಾ 4 ಸಾವಿರ ರೂ ಕೊಟ್ಟು ಮುಸ್ಲಿಂ 2 ಸೈಟ್ ಗಳನ್ನು ಮತ್ತು ಜ್ಞಾನದೇವ್ ರವರು 2 ಸೈಟ್ ಗಳನ್ನು ತೆಗೆದುಕೊಂಡಿದ್ದರು. ಸೈಟ್ ನಂ.. 11 ಮತ್ತು 12 ಮುಸ್ಲಿಂ ರದ್ದು. ಜ್ಞಾನದೇವ್ ರವರ ಸೈಟ್‌ನಂ. 1, 2 ಮತ್ತು 3 ಆಗಿರುತ್ತದೆ.

ಪುರಸಭೆಯವರು ಹರಾಜಿನಲ್ಲಿ ಸೈಟ್ ಪಡೆದುಕೊಂಡವರಿಗೆ ಮಂಜೂರಾತಿ ಪತ್ರ ಕೊಟ್ಟಿರುತ್ತಾರೆ. ಇಬ್ಬರಿಗೂ ಅಲಾಟ್ ಅದ ಮಂಜೂರಾತಿ ಪತ್ರಗಳನ್ನು ನಾನು ನೋಡಿರುತ್ತೇನೆ. ಮೇಲೆ ಹೇಳಿದ ಚಕ್ಕುಬಂದಿಯೇ ಜ್ಞಾನದೇವ್ ರವರಿಗೆ ಅಲಾಟ್ ಆದ ಸೈಟ್ ನಂಬರ್ 1, 2 ಮತ್ತು 3 ರ ಚಕ್ಕುಬಂದಿ ಆಗಿರುತ್ತದೆ. ಮುಸ್ಲಿಂ ರವರಿಗೆ ಅಲಾಟ್ ಆದ ಸೈಟ್ ನಂ. 11 ರ ಪೂರ್ವಕ್ಕೆ ಬೇರೆಯವರು ಸೈಟ್, ಪಶ್ಚಿಮಕ್ಕೆ ಜ್ಞಾನದೇವ್ ರವರ ಸೈಟ್, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ರತ್ನಾಪುರಿ ರಸ್ತೆ ಇದೆ. ಅದೆ ರೀತಿ ಇದೆ ಚಕ್ಕುಬಂದಿ 12 ರ ಸೈಟ್ ಗೂ ಅನ್ವಯಿಸುತ್ತದೆ. 1, 2 ಮತ್ತು 3 ಸೈಟ್ ಗಳ ಹಕ್ಕು ಪತ್ರ ಜ್ಞಾನದೇವ್ ರವರ ಹೆಸರಿಗೆ ಇರುತ್ತದೆ.

ಜ್ಞಾನದೇವ ರವರ ವಾರಸುದಾರರು ತಮಗೆ ಅನ್ಯಾಯವಾಗಿದೆ ತಮ್ಮ ಪರವಾಗಿ ನ್ಯಾಯಾಲಯಕ್ಕೆ ಬಂದು ಪ್ರಮಾಣ ಪತ್ರ ಸಲ್ಲಿಸುವಂತೆ ಕೇಳಿಕೊಂಡಿದ್ದರು. ಯಾವ ಸೈಟ್ ನಂಬರ್

ಆಗಲಿ, ಚಕ್ಕುಬಂದಿ ಆಗಲಿ ಗೊತ್ತಿಲ್ಲದಿದ್ದರೂ ಆಸ್ತಿಗಳನ್ನು ನೋಡದಿದ್ದರೂ ಜ್ಞಾನದೇವ್ ರವರ ವಾರಸುದಾರರ ಆಮಿಷಕ್ಕೆ ಒಳಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜ್ಞಾನದೇವ ರವರ ಸೈಟ್ ನಂ. 1 ಮತ್ತು 2 ರಲ್ಲಿ ರಾಘವೇಂದ್ರ ಸಾ-ಮಿಲ್ ಅನ್ನು ಕಟ್ಟಿಸಿದ್ದಾರೆ. 40 ವರ್ಷಗಳಿಂದಲೂ ಸದರಿ ಸೈಟ್ ನಂ. 1 ಮತ್ತು 2 ರಲ್ಲಿಯೂ ಸಾ-ಮಿಲ್ ಅನ್ನು ನಡೆಸುತ್ತಿದ್ದಾರೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ., ಹುಣಸೂರು.